# ಕರ್ಮಯೋಗ

❁ ಕುಡುಕ ಹೆಚ್ಚಾಗಿ ಮದ್ಯ ಕುಡಿದ ಎಂದರೆ ಆತ ಪ್ರಜ್ಞೆ ಇಟ್ಟುಕೊಂಡಿರಲಾಗುವುದಿಲ್ಲ. ಎಲ್ಲೋ ಒಂದೆರಡಾಣೆಯ ಮದ್ಯ ಕುಡಿದರೆ ಮಾತ್ರ ತನ್ನ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗಬಲ್ಲ. ಭಗವಂತನ ಕಡೆಗೆ ನಾವು ಮುಂದುವರಿದಷ್ಟೂ ಆತ ನಮ್ಮ ಕೆಲಸ ಕಾರ್ಯಗಳನ್ನು ಕಡಿಮೆ ಮಾಡಿಕೊಟ್ಟು ಬಿಡುತ್ತಾನೆ. ಹೆದರಿಕೊಳ್ಳಬೇಡ.



❁ ಸದ್ಯ ಮಾಡಬೇಕಾಗಿರುವ ಕೆಲಸ ಗಳನ್ನು ಮಾಡಿ ಮುಗಿಸಿಬಿಡು. ಬಳಿಕ ನಿಶ್ಚಿಂತೆಯಿಂದ ಇರಬಲ್ಲೆ. ಗೃಹಿಣಿ ಅಡಿಗೆ ಕೆಲಸಗಳನ್ನೆಲ್ಲಾ ಮಾಡಿ ಮುಗಿಸಿ ಸ್ನಾನಕ್ಕೆ ಹೋದಳು ಎಂದರೆ ಮತ್ತೆ ಕರೆದರೆ ಹಿಂದಿರುಗಿ ಬರುವುದಿಲ್ಲ— ಗಂಟಲು ಕಿತ್ತುಕೊಂಡರೂ ಹಿಂದಿರುಗಿ ಬರುವುದಿಲ್ಲ.

❁ ನಮ್ಮ ಪ್ರತಿಯೊಬ್ಬರ ಆಂತರ್ಯದಲ್ಲೂ ಭಗವಂತ ಇದ್ದಾನೆ. ಅದು ಅರಿವಿಗೆ ಬಂತು ಎಂದರೆ, ಎಲ್ಲಾ ಕೆಲಸ ಕಾರ್ಯಗಳನ್ನು ಬಿಟ್ಟು ಆತನನ್ನು ಕರೆಯಬೇಕು ಅಂತ ನಮಗೆ ಇಚ್ಛೆಯಾಗಿ ಬಿಡುತ್ತದೆ.

❁ ಮೊದಲು ಸ್ವಲ್ಪ ಕಾಲ ಸೊಂಟ ಕಟ್ಟಬೇಕಾಗುತ್ತದೆ. ಬಳಿಕ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಎಲ್ಲಿಯವರೆಗೆ ದೋಣಿ ಅಲೆ, ಬಿರುಮಳೆ, ಬಿರುಗಾಳಿ ಇವುಗಳ ಮೂಲಕ ಅಥವಾ ನದಿಯ ತಿರುವಿನ ಮೂಲಕ ಹಾದುಹೋಗಬೇಕಾಗಿರುವುದೊ ಅಲ್ಲಿಯವರೆಗೆ ದೋಣಿ ನಡೆಸುವವ ಎದ್ದು ನಿಂತು ಚುಕ್ಕಾಣಿ ಹಲಗೆಯನ್ನು ಬಿಗಿಯಾಗಿ ಹಿಡಿದುಕೊಂಡಿರಬೇಕಾಗುತ್ತದೆ. ಆದರೆ ಅದನ್ನು ದಾಟಿಯಾದ ನಂತರ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಅದು ತಿರುವನ್ನು ಹಾದ ನಂತರ ಅನುಕೂಲವಾದ ಗಾಳಿ ಬೀಸಲಾರಂಭಿಸಿದರೆ ಚುಕ್ಕಾಣಿ ಹಲಗೆಯನ್ನು ಸುಮ್ಮನೆ ಕೈಯಲ್ಲಿ ಹಿಡಿದುಕೊಂಡು ಹಾಯಾಗಿ ಕುಳಿತುಕೊಳ್ಳುತ್ತಾನೆ. ಬಳಿಕ ಪಟ ಕಟ್ಟಲು ವ್ಯವಸ್ಥೆ ಮಾಡಿ ತಂಬಾಕು ಸೇದಲು ಸಿದ್ಧನಾಗುತ್ತಾನೆ. ಹಾಗೇನೆ ಸಾಧಕ ಕಾಮ-ಕಾಂಚನಗಳ ಬಿರುಗಾಳಿ, ಬಿರುಮಳೆ ಇವನ್ನೆಲ್ಲಾ ದಾಟಿಬಿಟ್ಟ ಅಂದರೆ ಆಗ ಆತನಿಗೆ ಶಾಂತಿ.

❁ ಒಬ್ಬೊಬ್ಬರೂ ತಪ್ಪದೆ ಎಲ್ಲರೂ ಕರ್ಮ ಮಾಡುತ್ತಲೇ ಇದ್ದಾರೆ. ಭಗವಂತನ ನಾಮಗುಣಕೀರ್ತನೆ ಮಾಡುವುದೂ ಕರ್ಮವೆ. ಸೋಽಹಮ್ ವಾದಿಗಳ 'ನಾನೇ ಅವನು' ಎಂಬುದರ ಮೇಲಿನ ಧ್ಯಾನವೂ ಕರ್ಮವೆ. ಉಸಿರಾಡುವುದೂ ಕರ್ಮವೇ. ಕರ್ಮವನ್ನು ತ್ಯಾಗಮಾಡುವ ಹಾಗೇ ಇಲ್ಲ. ಆದ್ದರಿಂದ ಕರ್ಮ ಮಾಡು, ಅದರ ಫಲವನ್ನು ಭಗವಂತನಿಗೆ ಸಮರ್ಪಿಸಿಬಿಡು.

❁ ಬೇಕೂ ಅಂತ ಹೆಚ್ಚಾಗಿ ಕೆಲಸಕಾರ್ಯ ಗಂಟು ಹಾಕೊಳ್ಳುವುದು ಶ್ರೇಯಸ್ಕರವಲ್ಲ. ಹಾಗೆ ಮಾಡಿದರೆ ಭಗವಂತನನ್ನು ಮರೆತುಬಿಡಬೇಕಾಗುತ್ತದೆ. ಒಮ್ಮೆ ಕೆಲವರು ಕಾಳೀಘಾಟ್ಟಕ್ಕೆ ಬಂದರು. ಅವರ ಇಡೀ ಸಮಯವೆಲ್ಲ ದಾನಧರ್ಮಾದಿ ಕಾರ್ಯಗಳಲ್ಲೇ ಕಳೆದು ಹೋಯಿತು. ಅವರಿಗೆ ಭಗವತಿಯ ದರ್ಶನ ಮಾಡುವುದಕ್ಕೆ ಸಮಯವೇ ದೊರಕಲಿಲ್ಲ!

❁ ಅಧ್ಯಾತ್ಮಜೀವನದ ಆರಂಭದಲ್ಲಿ ಕರ್ಮಗಳ ಗಡಿಬಿಡಿ ಬಹಳವಾಗಿ ಇರುತ್ತದೆ. ಭಗವಂತನ ಕಡೆಗೆ ಮುಂದುವರಿದಷ್ಟೂ ಕರ್ಮ ಕಡಿಮೆ ಕಡಿಮೆಯಾಗಿ ಹೋಗುತ್ತದೆ. ಕಟ್ಟಕಡೆಗೆ ಕರ್ಮತ್ಯಾಗ ಉಂಟಾಗಿ ಸಮಾಧಿ ದೊರೆಯುತ್ತದೆ.ಈ ಜಗತ್ತು ಕರ್ಮಭೂಮಿ. ಇಲ್ಲಿಗೆ ನಾವು ಕೆಲವು ಕರ್ಮಗಳನ್ನು ಮಾಡಲು ಬಂದಿದ್ದೇವೆ.

❁ ಇಲ್ಲಿ ಒಂದು ಸ್ವಲ್ಪ ಕೆಲಸ ಮಾಡಬೇಕಾದದ್ದೆ. ಇದೂ ಒಂದು ವಿಧದ ಸಾಧನೆಯೇ. ಆದಷ್ಟು ಬೇಗ ನಾವು ಮಾಡಬೇಕಾಗಿರುವ ಕರ್ಮಗಳನ್ನು ಮಾಡಿ ಮುಗಿಸಿಕೊಂಡುಬಿಡಬೇಕು. ಅಕ್ಕಸಾಲಿಗ ಚಿನ್ನ ಕರಗಿಸುವಾಗ ಸಾಕಾದಷ್ಟು ಶಾಖವನ್ನು ಉತ್ಪತ್ತಿಮಾಡಲು ತಿದಿ, ಬೀಸಣಿಗೆ, ಊದುಕೊಳವೆ ಎಲ್ಲವನ್ನೂ ಉಪಯೋಗಿಸುತ್ತಾನೆ. ಚಿನ್ನವನ್ನು ಕರಗಿಸಿದ ನಂತರ ಹಾಯಾಗಿ ಕುಳಿತು ತನ್ನ ಸೇವಕರಿಗೆ ಹೇಳುತ್ತಾನೆ, ಗುಡುಗುಡಿ ತಯಾರುಮಾಡುವಂತೆ.

❁ ಸಾಂಸಾರಿಕ ಕೆಲಸಕಾರ್ಯಗಳನ್ನು ನಿಷ್ಕಾಮ ಭಾವನೆಯಿಂದ ಮಾಡಲು ಪ್ರಯತ್ನಿಸಬೇಕು. ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣು ಬಿಡಿಸಬೇಕು. ಧನಿಕನ ಮನೆ ದಾಸಿ ಎಲ್ಲಾ ಕೆಲಸಗಳನ್ನೂ ಮಾಡುತ್ತಾಳೆ. ಆದರೆ ಆಕೆಯ ಮನಸ್ಸು ಮಾತ್ರ ತನ್ನ ಊರಿನಲ್ಲೇ ನೆಲಸಿರುತ್ತದೆ. ಇದಕ್ಕೇ ನಿಷ್ಕಾಮ ಕರ್ಮ ಅಂತ ಹೆಸರು.ಸಂಸಾರಿಗಳಿಗೆ ಸೇವ್ಯ-ಸೇವಕ ಭಾವವೇ ಒಳ್ಳೆಯದು. ಸಂಸಾರಿ ಈ ಪ್ರಪಂಚದ ಎಲ್ಲಾ ಕೆಲಸಕಾರ್ಯಗಳನ್ನೂ ಮಾಡಿಕೊಂಡು ಹೋಗುತ್ತಿರುವಾಗ ಆತನಿಗೆ 'ನಾನೇ ಅವನು' ಎಂಬ ಭಾವ ಹೇಗೆ ತಾನೆ ಉಂಟಾದೀತು? ಯಾರು 'ನಾನೇ ಅವನು' ಎಂದು ಹೇಳುತ್ತಾನೊ, ಆತನ ದೃಷ್ಟಿಯಿಂದ ಈ ಜಗತ್ತು ಸ್ವಪ್ನವಿದ್ದ ಹಾಗೆ. ಆತನ ಸ್ವಂತ ದೇಹ, ಮನಸ್ಸು ಎಲ್ಲವೂ ಆತನಿಗೆ ಸ್ವಪ್ನವಿದ್ದ ಹಾಗೆ. ಆದ್ದರಿಂದ ಆತ ಈ ಪ್ರಾಪಂಚಿಕ ಕೆಲಸಕಾರ್ಯಗಳನ್ನು ಮಾಡಲಾರ. ಇದಕ್ಕಾಗಿಯೇ ಗೃಹಸ್ಥನಿಗೆ ಸೇವಕಭಾವ, ದಾಸ್ಯಭಾವ ಒಳ್ಳೆಯದು.

ಶ್ರೀರಾಮಕೃಷ್ಣ ವಚನವೇದದಿಂದ